ಶ್ರೀ ಎಂ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷಣಿಯವರೇ, ನಾನು ಕೋಲಾರ ಜಿಲ್ಲೆಯವನಾದ್ದರಿಂದ ನನಗೆ ಮಾತನಾಡಲು ಅವಕಾಶ ಕೊಡಬೇಕು.

ಉಪಾಧ್ಯಕ್ಷಣಿಯವರು.—ಒಂದೇ ಪ್ರಶ್ನೆಗೆ ಹೆಚ್ಚು ಸಮಯ ಕೊಟ್ಟರೆ ನಮ್ಮ ಪ್ರಶ್ನೆಗಳು ಲ್ಯಾಪ್ಸ್ ಆಗುತ್ತವೆಯೆಂದು ಮಾನ್ಯ ಯಡಿಯೂರಪ್ಪನವರು ಕಾಗದವನ್ನು ಬರೆದು ಕಳುಹಿಸಿದ್ದಾರೆ.

ಶ್ರೀ ಡಿ. ಬಿ ಚಂದ್ರೇಗೌಡ —ಅವರು ಹೊಸ ಸದಸ್ಯರು. ಅವರು ಕೋಲಾರ ಜಿಲ್ಲೆಗೆ ಸಂಬಂಧಪಟ್ಟವರಾದ್ದರಿಂದ ಅವರಿಗೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಎಂ. ನಾರಾಯಣ ಸ್ವಾಮಿ.—ಅಲ್ಲಿ Irregularity or Misappropriation ನಡೆಯುತ್ತಿದೆ, ಅಲ್ಲಿ ಮೆಜಾರಿಟಿ ಇಲ್ಲವೆಂದು ಹೇಳುತ್ತಾರೆ. ಅದು ಸರಿಯಲ್ಲ. ಜನತಾ ದಳಕ್ಕೆ ಅಲ್ಲಿ ಮೆಜಾರಿಟಿ ಇಲ್ಲದಿದ್ದರೆ ಕಾಂಗ್ರೆಸ್‌ನವರು ಇಳಿಸಬಹುದು ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮನೆಗೆ ಹಣವನ್ನು ತೆಗೆದುಕೊಂಡು ಹೋಗಿದ್ದರೆ ಅದು ಮಿಸ್ ಅಪ್ರೊಪ್ರಿಯೇಷನ್ ಆಗುತ್ತದೆ. ಆದರೆ ಸಾರ್ವಜನಿಕರ ಹಿತದೃಷ್ಟಿಯಿಂದ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಕಾನೂನು ವ್ಯಾಪ್ತಿಯಲ್ಲಿ ಈ ಕೆಲಸ ಮಾಡಿದ್ದಾರೆಯೇ ಹೊರತು ಕಾನೂನು ಬಿಟ್ಟು ಏನೂ ಮಾಡಿಲ್ಲ.

ಉಪಾಧ್ಯಕ್ಷಣಿಯವರು.—ಈಗ ಇದರ ಬಗ್ಗೆ ಹೆಚ್ಚು ಮಾತನಾಡಲು ಸಾಧ್ಯವಿಲ್ಲ. ನೀವು ಬೇಕಾದರೆ ಅರ್ಧ ಗಂಟೆ ಚರ್ಚೆಗೆ ಬೇರೆ ನೋಟೀಸ್ ಕಳುಹಿಸಿಕೊಡಿ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರ ಈ ವಾದವನ್ನು ಒಪ್ಪಲು ಸಾಧ್ಯವಿಲ್ಲ.

ಶ್ರೀ ಹರ್ಷಕುಮಾರ್ ಗೌಡ.—ಮೈಸೂರು ಜಿಲ್ಲಾ ಪರಿಷತ್ತಿನ ಬಗ್ಗೆ ನಾನು ಮಾತನಾಡಬೇಕು. ಅದಕ್ಕೆ ಅವಕಾಶವನ್ನು ಮಾಡಿಕೊಡಿ.

ಉಪಾಧ್ಯಕ್ಷಣಿಯವರು.—ಈ ಪ್ರಶ್ನೆ ಕೋಲಾರ ಜಿಲ್ಲಾ ಪರಿಷತ್ತಿಗೆ ಸಂಬಂಧಪಟ್ಟಿದ್ದು.

ಶ್ರೀ ಎಂ. ವೈ. ಘೋರ್ಪಡೆ.—ಅವರನ್ನು ತೆಗೆಯಬೇಕಾದರೆ ೨/೩ ಮೆಜಾರಿಟಿ ಬೇಕಾಗುತ್ತದೆ. ಇಡೀ ಕರ್ನಾಟಕ ರಾಜ್ಯದಲ್ಲಿ ಈಗ ಒಂದು ಅಭಿಪ್ರಾಯ ಬಂದಿದೆ. ಏನೆಂದರೆ ೨/೩ ಮೆಜಾರಿಟಿ ರೂಲ್ ಅನ್ನು ತೆಗೆಯಬೇಕೆಂದು ಏತಕ್ಕೆಂದರೆ ಇದರಿಂದ ಅನಾಮಾಲಿಸ್ ಬರುತ್ತಿದೆ. ಈಗ ಅವರ ಮೆಜಾರಿಟಿ ಹೋಗಿದೆ ೨/೩ ಮೆಜಾರಿಟಿ ಬಗ್ಗೆ ರೂಲ್ ಇರುವುದರಿಂದ ಅವರನ್ನು ತೆಗೆಯಲು ಆಗುತ್ತಿಲ್ಲ. ಇದರಿಂದ ಮೂಲಭೂತ ತೊಂದರೆ ಆಗಿದೆ.

ರಾಜ್ಯದಲ್ಲಿ ಅರಣ್ಯ ಬೆಳೆಸುವುದು.

೪೬. ಶ್ರೀ ಕೆ. ಲಕ್ಕಣ್ಣ. (ರಾಜಾಜಿನಗರ).—ಮಾನ್ಯ ಅರಣ್ಯ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಅರಣ್ಯ ಪ್ರದೇಶದ ವಿಸ್ತೀರ್ಣ ಎಷ್ಟು ? ಹಾಗೂ ಆ ಪ್ರದೇಶದಲ್ಲಿ ಯಾವ ಯಾವ ಮರಗಳನ್ನು ಬೆಳಸಲಾಗಿದೆ ?

ಆ) ಹಾಳಿ ಖಾಲಿಯಿರುವ ಜಮೀನಿನ ವಿಸ್ತೀರ್ಣವೆಷ್ಟು. ಹಾಗೂ ಅದರಲ್ಲಿ ಅರಣ್ಯ ಬೆಳೆಸಲು ಕೈಗೊಂಡಿರುವ ಕಾರ್ಯ ಕ್ರಮವೇನು ?

ಇ) ಇದುವರೆವಿಗೂ ಅರಣ್ಯ ಬೆಳೆಸುವ, ಕಾರ್ಯಕ್ರಮಕ್ಕೆ ಎಷ್ಟು ಹಣ ಖರ್ಚಾಗಿದೆ.

ಈ) ಮಾಡಿರುವ ಹಣಕ್ಕೆ ತಕ್ಕಂತೆ ಅರಣ್ಯ ಅಭಿವೃದ್ಧಿಯಾಗಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮಂತ್ರಿಗಳು).—

(ಅ) ರಾಜ್ಯದಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣ ೩೮,೬೪೨ ಚದರ ಕಿಲೋಮೀಟರುಗಳು. ಈ ಅರಣ್ಯ ಪ್ರದೇಶದಲ್ಲಿ ಪ್ರಕೃತಿದತ್ತವಾಗಿ ಬೆಳೆಯುತ್ತಿರುವ ಮರ ಗಿಡಗಳು ಶೇ. ೭೦ ಭಾಗದಲ್ಲಿ ಇರುತ್ತದೆ. ಈ ಪ್ರದೇಶದಲ್ಲಿ ಅಯಾ ಸ್ಥಳಗಳಲ್ಲಿ ನಾಟಿ ಕೊಡುವ ಜಾತಿಗಳಾದ ಸಾಗುವಾನಿ, ಮುತ್ತಿ, ನಂದಿ, ಬೇಟೆ ಹೊನ್ನೆ ಇತ್ಯಾದಿ ಮರಗಳನ್ನು ಸುರುವಲು ಕಟ್ಟಿಗೆ ಕೊಡುವ ಸುರಗಿ, ದಿಂಡಗ, ಜಾಲಿ, ಬಂಗಾಳಿ ಜಾಲಿ, ಸೀಮೆ ತಂಗಡಿ, ನೀಲಗಿರಿ ಇತ್ಯಾದಿ ಮರಗಳನ್ನು, ಮೇವು ಕೊಡುವ ಕಮರಿ, ಬೇವು. ಬಾಗೆ ಇತ್ಯಾದಿ ಮರಗಳನ್ನು ಹಣ್ಣು ಕೊಡುವ ಹುಣಸೆ, ನೆಲ್ಲಿ ನೇರಲು, ಬೋರೆ ಇತ್ಯಾದಿ ಗಿಡ ಮರಗಳನ್ನು ಮತ್ತು ಬಿದಿರು ಬೆತ್ತಗಳನ್ನು ಬೆಳೆಸಲಾಗಿದೆ.

(ಆ) ಹಾಲಿ ಖಾಲಿ ಇರುವ ಅರಣ್ಯ ಪ್ರದೇಶದ ವಿಸ್ತೀರ್ಣ ಸುಮಾರು ೧೧,೬೧,೦೦೮ ಹೆಕ್ಟೇರು ಗಳು ಅರಣ್ಯ ಬೆಳೆಸಲು ಪ್ರತಿ ವರ್ಷ ಕ್ರಮ ತೆಗೆದುಕೊಂಡು ಇತ್ತೀಚಿನ ವರ್ಷಗಳಲ್ಲಿ ಸುಮಾರು ೪೬,೦೦೦ ಹೆಕ್ಟೇರು ನೆಡು ತೋಪುಗಳನ್ನು ಪ್ರತಿವರ್ಷ ಬೆಳೆಸಲಾಗುತ್ತಿದೆ.

(ಇ) ಹಿಂದಿನ ಐದು ವರ್ಷಗಳಲ್ಲಿ ಅಂದರೆ ೧೯೮೫ ರಿಂದ ೧೯೮೯–೯೦ರ ವರೆಗೆ ಅರಣ್ಯ ಬೆಳೆಸುವ ಕೆಲಸಕ್ಕೆ ೧೮,೧೪,೬೫೮ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ.

(ಈ) ಹೌದು.

ANNEXURE—I

District wise forest area in Karnataka State for the year 1987-88

(Area in Sq. Kilometers)

Sl. No.	District	Geographical area	Area with Forest Department	Percentage of Forest area to Geographical area.
1	Bangalore	8005	1168.02	14.06
2	Belgaum	13415	2245.57	16.73
3	Bellary	9885	1743.53	17.64
4	Bidar	5448	482.31	8.85
5	Bijapur	17069	827.58	4.84
6	Chickmagalur	7201	2197.08	30.06
7	Chitradurga	10852	1562.29	14.40
8	D. Kannada	8441	5182.30	61.52
9	Dharwad	13738	1436.73	10.46
10	Gulbarga	16224	1137.85	7.01
11	Hassan	6814	541.07	7.94
12	Kodagu	4102	1259.52	30.43
13	Kolar	8223	1039.41	12.64
14	Mandya	4961	193.79	3.91
15	Mysore	11954	4129.62	34.52
16	Raichur	14017	1090.03	7.78
17	Shimoga	10553	3270.16	30.90
18	Tumkur	10598	865.17	8.16
19	U. Kannada	10291	8291.51	80.57
	Total :	191791	38645.54	20.16

ANNEXURE--II

Plantations Raised During the year 1988–89 (upto end of December 1988) (In Hectares)

Sl. No.	Species	Upto end of 1986–87	1987–88	1988–89	Total
1	Teak	123860	1832	676	126368
2	Softwood	53767	1680	753	56200
3	Cashew	39035	305	33	39337
4	Eucalyptus	120904	5085	4949	130938
5	Fuel and Misc.	397830	40038	37491	475359
6	Bamboos	4449	443	557	5449
7	Lavender	1097	...	...	1097
8	Red Oil Plam	9	...	...	9
9	Coca	1595	...	...	1595
10	Rubber	5527	258	258	6043
11	Spices	74	...	...	74
12	Coffee	20	...	...	20
13	Tea	7	...	...	7
14	Fruit Orchards	873	319	313	1505
15	Sandal (Pure)	3635	180	236	4051
16	School Forestry	2759	564	1621	4944
17	Avenue Planting (Kms)	5731	1448	2179	9358
18	Canal Side (Kms)	1828	195	258	2281
	Total	755441	50704	46887	853032
	Avene Planting (Kms)	5731	1448	2179	9358
	Canals side planting (Kms)	1828	195	258	2281

Note Eucalyptus plantations includes plantation raised by K. F. P. C.

ಶ್ರೀ ಕೆ. ಲಕ್ಕಣ್ಣ.—ಹಾಲಿ ಖಾಲಿ ಇರುವ ಅರಣ್ಯ ಪ್ರದೇಶದ ವಿಸ್ತೀರ್ಣ ೧೧ ಲಕ್ಷ ಚಿಲ್ಲ ಹೆಕ್ಟೇರ್ ಎಂದಿದ್ದಾರೆ. ಕಳೆದ ೫ ವರ್ಷಗಳಲ್ಲಿ ಅರಣ್ಯ ಬೆಳೆಸಲು ಆದ ಖರ್ಚು ಎಷ್ಟು ಎಂದು ಕೇಳಿದ್ದಕ್ಕೆ ೧೮,೧೫೯ ಲಕ್ಷ ಎಂದು ಹೇಳಿದ್ದಾರೆ. ಇದೇನು ಲಕ್ಷವೋ ಕೋಟಿಯೋ ಎಂಬುದನ್ನು ಹೇಳಬೇಕು. ಪ್ರಕೃತಿದತ್ತವಾಗಿ ಅರಣ್ಯದಲ್ಲಿ ಬೆಳೆದಿದ್ದ ಮರಗಿಡಗಳನ್ನು ಅರಣ್ಯ ಇಲಾಖೆಯವರು ಕಡಿದುಹಾಕಿದ್ದಾರೆ. ಆನಂತರ ಆ ಪ್ರದೇಶದ ಬೆಳವಣಿಗೆಗೆ ಅರಣ್ಯಾಧಿಕಾರಿಗಳು ಗಮನಕೊಟ್ಟಿಲ್ಲ. ಇದರಿಂದ ಮಳೆ ಬಾರದ ರೀತಿಯಲ್ಲಾಗಿದೆ ಎಂದು ಹಿರಿಯರು ಅಭಿಪ್ರಾಯ ಪಟ್ಟಿದ್ದಾರೆ. ವರ್ಷಕ್ಕೆ ೪೬ ಸಾವಿರ ಹೆಕ್ಟೇರ್ ಅರಣ್ಯೀಕರಣ ಮಾಡುತ್ತಿದ್ದೇವೆಂದು ಹೇಳಿದ್ದಾರೆ, ಹೀಗೆ ಕಳೆದ ೫ ವರ್ಷದಿಂದ ಎಷ್ಟು ಬೆಳೆಸಿದ್ದಾರೆಂದು ಇಲ್ಲಿ ವಿವರ ಕೊಟ್ಟಿಲ್ಲ, ಅದನ್ನು ಕೊಡಬೇಕು.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಕಾರ್ಯದರ್ಶಿಯವರು).—ಅಧ್ಯಕ್ಷಸ್ಥಾನೀಯರೆ, ಮಾನ್ಯ ಸದಸ್ಯರು ವ್ಯಕ್ತ ಪಡಿಸಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇನೆ. ಖಾಲಿ ಇರುವ ೧೧,೬೧, ೦೦೮ ಹೆಕ್ಟೇರಿನಲ್ಲಿ ಅರಣ್ಯ ಬೆಳೆಸುವ ಬಗ್ಗೆ ತೀವ್ರವಾಗಿ ಕಾರ್ಯಕ್ರಮ ಕೈಗೊಳ್ಳುತ್ತೇವೆ. ಮತ್ತೆ ಎಲ್ಲಿಯಾದರೂ ಅರಣ್ಯಾಧಿಕಾರಿಗಳೇ ಅರಣ್ಯ ರಕ್ಷಣೆ ಮಾಡದಿರುವುದು ಕಂಡು ಬಂದರೆ ಅದನ್ನು ನನ್ನ ಗಮನಕ್ಕೆ ತಂದಲ್ಲಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಲಕ್ಕಣ್ಣ.—ಇದುವರೆಗೂ ಎಷ್ಟು ಖರ್ಚಾಗಿದೆ ಮತ್ತು ಇಲ್ಲಿ ಕೊಟ್ಟಿರುವುದು ೧೮ ಲಕ್ಷವೋ ಅಥವಾ ಕೋಟಿಯೋ ಎಂದು ಗೊತ್ತಾಗಲಿಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಆದು ೧೮೧೯ ಕೋಟಿ ೪೯ ಲಕ್ಷ ಚಿಲ್ಲರೆ.

ಶ್ರೀ ಕೆ. ಲಕ್ಕಣ್ಣ.—ಬೆಂಗಳೂರು ಮಹಾನಗರಪಾಲಿಕೆಯಿಂದ ಗಿಡ ನೆಡಲು ೧೦ ಲಕ್ಷ ಕೊಟ್ಟಿದ್ದರೂ ಗಿಡಗಳನ್ನು ಬೆಳೆಸುವ ಕೆಲಸ ವ್ಯಾಪಕವಾಗಿ ನಡೆದಿಲ್ಲ. ಇದಕ್ಕೆ ವಿವರಣೆ ಕೊಡಿ ?

ಶ್ರೀ ಬಿ. ಬಸವಲಿಂಗಪ್ಪ.—ಮಾಡಿಲ್ಲ ಎನ್ನುವುದು ನನ್ನ ಗಮನದಲ್ಲಿದೆ. ಹೇಗೆ ಮಾಡಬೇಕೆಂದು ಸಲಹೆ ಕೊಟ್ಟರೆ ಹಾಗೆ ಮಾಡುತ್ತೇನೆ.

ಶ್ರೀ ಕೆ. ಲಕ್ಕಣ್ಣ.—ಹಣ ಖರ್ಚು ಮಾಡಿರುವುದಕ್ಕೆ ವಿವರಣೆ ಕೊಟ್ಟಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಕೇಳಿರುವ ಪ್ರಶ್ನೆ ಇದಲ್ಲ. ಈ ಬಗ್ಗೆ ಬೇರೆ ಪ್ರಶ್ನೆ ಕೇಳಿ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಅರಣ್ಯ ರಕ್ಷಕರೆಲ್ಲ ಅರಣ್ಯ ಭಕ್ಷಕರಾಗಿದ್ದಾರೆ. ಆದ್ದರಿಂದ ಅರಣ್ಯ ಇಲಾಖೆಯನ್ನು ಸರಿಪಡಿಸಿ ಇಲ್ಲವಾದ್ದು ಮಾಡಿಬಿಡಿ.

ಶ್ರೀ ಬಿ. ಬಸವಲಿಂಗಪ್ಪ.—ಅರಣ್ಯ ಇಲಾಖೆಯನ್ನು ಸ್ವಶಕ್ತಿಯಿಂದ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಆ ಸಂಕಲ್ಪ ಮಾಡಿದ್ದೇವೆ. ಆ ಬಗ್ಗೆ ಸಂಶಯ ಪಡಬೇಕಾಗಿಲ್ಲ. ಈಗ ಇದು ವರೆಗೂ ಏನೇನಾಗಿದೆ ಎಂದು ಅಭ್ಯಾಸ ಮಾಡಬೇಕು ನನಗೆ ಈ ಬಗ್ಗೆ ಎಲ್ಲ ಗೊತ್ತಿದೆ ಎಂದು ಹೇಳಲು ನಾನು ತಯಾರಿಲ್ಲ. ಅಭ್ಯಾಸ ಮಾಡಿದ ಮೇಲೆ ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ಯೋಚನೆ ಮಾಡುತ್ತೇನೆ.

ಸಾರ್ಕ್ ಸಮ್ಮೇಳನದ ಸಮಯದಲ್ಲಿ ಖರೀದಿಸಿರುವ ಉಪಕರಣಗಳು

೬೯೭ ಶ್ರೀ ಷಫಿ ಅಹಮದ್ (ತುಮಕೂರು) ಮತ್ತು ಶ್ರೀ ರಾಮಲಿಂಗಾರೆಡ್ಡಿ (ಜಯನಗರ)—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾರ್ಕ್ ಸಮ್ಮೇಳನದ ಅವಧಿಯಲ್ಲಿ ಅತ್ಯಾಧುನಿಕ ಉಪಕರಣಗಳನ್ನು ಬೌರಿಂಗ್ ಆಸ್ಪತ್ರೆಗೆ ಸರಬರಾಜು ಮಾಡಿರುವುದು ನಿಜವೇ ?

ಆ) ಆ ಉಪಕರಣಗಳನ್ನು ಈಗ ಉಪಯೋಗಿಸಲಾಗುತ್ತಿದೆಯೇ ?

ಇ) ಇಲ್ಲದೆ ಇದ್ದರೆ, ಈ ಉಪಕರಣಗಳು ಈಗ ಯಾವ ಪರಿಸ್ಥಿತಿಯಲ್ಲಿವೆ ?

ಈ) ಸರ್ಕಾರವು ಈ ಉಪಕರಣಗಳನ್ನು ಸಾರ್ವಜನಿಕರಿಗೆ ಉಪಯೋಗಕ್ಕೆ ಬಿಡುಗಡೆಗಿಸಿ ಕೊಡಲಾಗುವುದೇ ?

ಶ್ರೀಮತಿ ಮಾನೋರಮಾ ಮಾಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

(ಅ) ಹೌದು.